ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನಾ.ದಂಡಾಧಿಕಾರಿಗಳ ನ್ಯಾಯಾಲಯ,
ಕೆ.ಆರ್.ನಗರ.

ಸಿ.ಸಿ.ನಂ.1471/2019

ಪಿರ್ಯಾದುದಾರರುಃ ಸರ್ಕಾರದ ಪರವಾಗಿ ಕೆ.ಆರ್.ನಗರ ಪೋಲೀಸರು

ವಿರುದ್ಧ

ಆರೋಪಿಃ ಸುಕಂದರಾಜು ಬಿನ್ ಲೇಟ್ ಸಣ್ಣಸೋಮೇಗೌಡ
ಉಃ ಸಣ್ಣಸ್ವಾಮಿ, 55 ವರ್ಷ,
ಕಗ್ಗೆರೆ ಗ್ರಾಮ, ಕೆ.ಆರ್.ನಗರ ತಾಲ್ಲೂಕು.

ಆಪಾದನೆ

ದಿನಾಂಕಃ 23-08-2017 ರಂದು ಸಂಜೆ 4.45 ಗಂಟೆ ಸಮಯದಲ್ಲಿ ಕೆ.ಆರ್.ನಗರ ಪೋಲೀಸ್ ಠಾಣಾ ಸರಹದ್ದು ಈ ನ್ಯಾಯಾಲಯದ ವ್ಯಾಪ್ತಿಗೊಳಪಡುವ ಕೆ.ಆರ್.ನಗರದ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಪಶ್ಚಿಮ ಭಾಗದ ಪ್ಲಾಟ್ ಫಾರಂ ನಂ.6 ರ ಮುಂಭಾಗದ ಸಿಮೆಂಟ್ ರಸ್ತೆಯಲ್ಲಿ ಮೃತ ವಿಜಯ್ ಬಿನ್ ಪಾಂಡುರಂಗ ಈತನು ಕೆಸ್ತೂರು ಗ್ರಾಮಕ್ಕೆ ಹೋಗಲು ಬಸ್ಸಿಗಾಗಿ ಕಾಯುತ್ತಿದ್ದಾಗ ಆರೋಪಿಯಾದ ನೀವು ಕೆಎ-09 ಎಫ್-4591 ನೇ ನಂಬರಿನ ಬಸ್ಸನ್ನು ಅತೀ ವೇಗವಾಗಿ ಮತ್ತು ನಿರ್ಲಕ್ಷತೆಯಿಂದ ಮಾನವೀಯ ಜೀವಕ್ಕೆ ಅಪಾಯವಾಗುವಂತೆ ಬಸ್ಸನ್ನು ಹಿಂದಕ್ಕೆ ಚಾಲನೆ ಮಾಡಿಕೊಂಡು ಬಂದು ಬಸ್ಸಿಗೆ ಹತ್ತಲು ನಿಂತಿದ್ದ ವಿಜಯ್ ಈತನಿಗೆ ಬಸ್ಸಿನ ಹಿಂಭಾಗದಿಂದ ಡಿಕ್ಕಿಪಡಿಸಿದ್ದು ನೀವು ಭಾ.ದಂ.ಸಂ. ಕಲಂ 279 ರಡಿ ಶಿಕ್ಷಾರ್ಹ ಅಪರಾಧವೆಸಗಿದ್ದೀರೆಂದು ನಿಮ್ಮ ಮೇಲೆ ಆಪಾದನೆ ಇದೆ.

ಮೇಲ್ಕಂಡ ದಿನಾಂಕ ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು ಅಪಘಾತಪಡಿಸಿದ್ದರಿಂದ ಬಸ್ಸಿನ ಹಿಂದಿನ ಎಡ ಚಕ್ರ ಮೃತ ವಿಜಯ್ ಈತನ ಎಡಕಾಲು ಪಾದಕ್ಕೆ ಎಡತೊಡೆಗೆ ಹಾಗೂ ವೃಷಣದ ಬಳಿ ಹತ್ತಿ ತೀವ್ರ ಪೆಟ್ಟಾಗಿ ಚಿಕಿತ್ಸೆಗಾಗಿ ಕೆ.ಆರ್.ನಗರದ ಆಸ್ಪತ್ರೆಗೆ ಸೇರಿಸಿ, ನಂತರ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ಸೇರಿಸಿ ನಂತರ ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಜೆ.ಎಸ್.ಎಸ್. ಆಸ್ಪತ್ರೆಗೆ ಸೇರಿಸಿದರೂ ಸಹ ಚಿಕಿತ್ಸೆ ಫಲಕಾರಿಯಾಗದೆ ಆತನು ದಿನಾಂಕಃ 25-08-2017 ರಂದು ಬೆಳಿಗ್ಗೆ 8.34 ಗಂಟೆಯಲ್ಲಿ ಮೃತನಾಗಿದ್ದು ನೀವು ಭಾ.ದಂ.ಸಂ. ಕಲಂ 304(ಎ)ರಡಿ ಶಿಕ್ಷಾರ್ಹ ಅಪರಾಧವೆಸಗಿದ್ದೀರೆಂದು ನಿಮ್ಮ ಮೇಲೆ ಆಪಾದನೆ ಇದೆ.

ಮೇಲ್ಕಂಡ ಆರೋಪಗಳನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುವುದರಿಂದ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಗೊಳಪಡುತ್ತೀರಿ.

ಪ್ರಶ್ನೆ1◌ಃ ನಿಮಗೆ ಈಗ ಓದಿ ಹೇಳಿದ ನಿಮ್ಮ ಮೇಲಿನ ಆರೋಪಗಳನ್ನು ಕೇಳಿಸಿಕೊಂಡಿರಾ? ತಿಳಿಯಿತೇ?

ಉತ್ತರಃ

ಪ್ರಶ್ನೆ2◌ಃ ಮೇಲ್ಕಂಡ ಆರೋಪಗಳನ್ನು ನೀವು ಒಪ್ಪಿಕೊಳ್ಳುತ್ತೀರೋ? ವಿಚಾರಣೆಯಾಗಬೇಕೋ?

ಉತ್ತರ ◌ಃ

(ಶ್ರೀನಾಥ್ ಕೆ.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ, ಕೆ.ಆರ್.ನಗರ.

ಕೆ.ಆರ್.ನಗರ,
ದಿನಾಂಕಃ 01-02-2020